ಬಾರಿ ಇಬ್ಬರೂ ಒಟ್ಟಿಗೆ ಹೋಗಿ ರಕ್ತ ಬದಲಾಯಿಸಿಕೊಂಡು ಬಂದಿದ್ದರಂತೆ. ಎಲ್ಲಾ ಸಂಗತಿಗಳನ್ನೂ ನನ್ನಪ್ಪನೇ ನನಗೆ ಹೇಳಿದ್ದು...' ಫಿಶ್ ಫ್ರೈ ಸವಿಯುತ್ತಾ ಹೇಳಿದ್ದಳು ನೀಲಾಂಜನ.

'ಧಾತುಸೇನ ನಿಜಕ್ಕೂ ಅದ್ಭುತ ವ್ಯಕ್ತಿ. ಇತಿಹಾಸದಿಂದ ಹಿಡಿದು ಖಗೋಳ ಶಾಸ್ತ್ರದವರೆಗೂ ತುಂಬಾ **deep** ಆಗಿ ತಿಳಿದುಕೊಂಡಿದ್ದಾರೆ...' ವಿಸ್ಕಿ ಗ್ಲಾಸನ್ನು ಖಾಲಿ ಮಾಡುತ್ತಾ ಧಾತುಸೇನರ ಮಾರ್ಮಿಕ ಮಾತುಗಳನ್ನು ನೆನಪಿಸಿಕೊಂಡಿದ್ದೆ.

'ಕಳೆದ ವಾರ ಇಲ್ಲಿಗೆ ಬರುವುದಕ್ಕೂ ಮೊದಲು ಕಾಳಹಸ್ತಿಗೆ ಹೋಗಿದ್ದೆ...' ನೀಲಾಂಜನ ಥಟ್ಟನೆ ಮಾತು ಬದಲಿಸುವುದರೊಂದಿಗೆ ಅಚ್ಚರಿ ಮೂಡಿಸಿದ್ದಳು.

'ಏಕೆ?' ಗ್ಲಾಸಿಗೆ ವಿಸ್ಕಿಯನ್ನು ಬಗ್ಗಿಸುತ್ತಾ ಕೇಳಿದ್ದೆ.

'ಸರ್ಪ ಸಂಸ್ಕಾರ ಮಾಡಿಸಲು. ನನ್ನನ್ನು ನೋಡಿದ ಪ್ರತಿಯೊಬ್ಬರು ನನಗೆ ಕಾಳಸರ್ಪ ದೋಷವಿರುವುದಾಗಿ ಹೇಳುತ್ತಿದ್ದರು. ನನ್ನ ತಾತ, ಮುತ್ತಾತಂದಿರು ತಮ್ಮ ಹೊಲ, ಗದ್ದೆ, ತೋಟ, ಆಲೆಮನೆಗಳಲ್ಲಿ ನೂರಾರು ಹಾವುಗಳನ್ನು ಸಾಯಿಸಿದ್ದರಂತೆ. ಜೊತೆಗೆ ಜಮೀನುದಾರಿಕೆಯ ಅಮಲಿನಲ್ಲಿ ಆಗದವರನೇಕರ ಖೂನಿಗಳನ್ನೂ ಮಾಡಿಸಿದ್ದರಂತೆ. ಆ ದೋಷ ಅಪ್ಪನಿಗೆ ಸುತ್ತಿಕೊಂಡಿತ್ತು. ನನ್ನ ಮೊದಲನೆಯ ಅಣ್ಣನನ್ನು ರಾಜಕೀಯದಲ್ಲಿ ಮೆರೆಸಬೇಕೆಂದು ಅಪ್ಪನ ಮಹದಾಸೆಯಾಗಿತ್ತು. ಆದರೆ ಅವನು ಉಸ್ಮಾನಿಯಾ ಯೂನಿವರ್ಸಿಟಿಯಲ್ಲಿ ಬಿ.ಎ ಓದುತ್ತಿರುವಾಗಲೇ ನಕ್ಸಲ್ ನಂಟನ್ನು ಬೆಳೆಸಿಕೊಂಡು ಕ್ರಾಂತಿ ಗೀತೆಗಳನ್ನು ಬರೆಯ ತೊಡಗಿದ್ದ. ಉಸ್ಮಾನಿಯಾ ಯೂನಿವರ್ಸಿಟಿಯಲ್ಲೆ ಪ್ರೊಫೆಸರ್ ಆಗಿ ಅನೇಕ ವರ್ಷಗಳ ಕಾಲ ಮನೆಗೆ ಕಾಲಿಟ್ಟಿರಲಿಲ್ಲ. ಅಪ್ಪನೇ ಹೋಗಿ ಕಾಡಿಬೇಡಿ ಮನೆಗೆ ಕರೆತಂದು ಮದುವೆಯನ್ನೂ ಮಾಡಿಸಿದ್ದರು. ಮೂರೇ ತಿಂಗಳಲ್ಲಿ ಅಣ್ಣನ ಹೆಂಡತಿ ತೌರಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಅಂದಿನಿಂದ ಪ್ರೊಫೆಸರ್ ಹುದ್ದೆಯನ್ನು ತೊರೆದು ಅಣ್ಣ ನಿರ್ಲಿಪ್ತನಾಗಿ ಹೊಲ, ಗದ್ದೆಗಳಲ್ಲಿ ಓಡಾಡಿಕೊಂಡಿದ್ದಾನೆ. ಇನ್ನು ಎರಡನೇ ಅಣ್ಣನನ್ನು ವಿದೇಶದಲ್ಲಿ ಡಾಕ್ಟರ್ ಓದಿಸಿ, ಹೈದರಾಬಾದ್‌ನಲ್ಲಿ ದೊಡ್ಡ ನರ್ಸಿಂಗ್ ಹೋಂ ಕಟ್ಟಿಸಬೇಕೆಂದು ಕನಸು ಕಂಡಿದ್ದ ಅಪ್ಪ. ಆದರೆ ಅವನು ಹೈಸ್ಕೂಲು ಕೊನೆಯ ವರ್ಷವನ್ನು ಕೂಡ ಪಾಸು ಮಾಡಲಾಗಲಿಲ್ಲ. ರಾಜಕೀಯದ ಪಟ್ಟುಗಳನ್ನು ಮಾತ್ರ ಚಿಕ್ಕಂದಿನಲ್ಲಿಯೇ ಕರಗತ ಮಾಡಿಕೊಂಡ. ಎರಡು ಬಾರಿಯಿಂದಲೂ ನಮ್ಮ ಕ್ಷೇತ್ರಕ್ಕೆ ಅವನೇ ಎಂ.ಎಲ್.ಎ. ತುಂಬಾ ಒರಟ, ಅಹಂಕಾರಿ. ವರ್ಷದಿಂದ ರಾಘವ ಪಂತಲು ಅವರ ಉಪದೇಶಗಳಿಂದ, ಹಿಡಿತದಿಂದ ಸುಧಾರಿಸುತ್ತಿದ್ದಾನೆ...' ವಿಸ್ಕಿ ಕುಡಿಯುವುದನ್ನು ಮುಗಿಸಿ ಊಟ ಮಾಡತೊಡಗಿದಳು. ನನಗೂ ಹಸಿವಾಗತೊಡಗಿತ್ತು.

'ಸರ್ಪ ಸಂಸ್ಕಾರ ಮಾಡಿಸಿದ ನಂತರ ಒಂದು ರೀತಿಯ ದೊಡ್ಡ ಸಮಾಧಾನ, ಖುಷಿ. ಜಡ್ಡುಗಟ್ಟಿದಂತಿದ್ದ ನನ್ನ ದೇಹ ಕೂಡ ಹಗುರವಾಗುತ್ತಿದೆ. ನನಗೀಗ ದೇಹ ಸುಖ ಬೇಕೆನಿಸುತ್ತಿದೆ. ಇದೇ ತಿಂಗಳಲ್ಲಿ ನಾನು ಆರ್ಗೆನಿಕ್ ಫರ್ಟಿಲೈಸರ್ ಫ್ಯಾಕ್ಟರಿಯನ್ನು ಪ್ರಾರಂಭಿಸುತ್ತೇನೆ. ನನ್ನ ಜಿಲ್ಲೆ ಭತ್ತದ ರಾಶಿಗಳಿಂದ ಸಂಭ್ರಮಿಸುವಂತೆ ಮಾಡುತ್ತೇನೆ. ಇದೆಲ್ಲ ಸರ್ಪ ಸಂಸ್ಕಾರದ ಫಲವಿರಬೇಕು...' ನೀಲಾಂಜನ ಬಳಿ ಬಂದು ನನ್ನನ್ನು ಆಲಂಗಿಸಿಕೊಂಡಳು. ಪರಿಮಳ ತುಂಬಿದ ಅವಳ ಸುಕೋಮಲ ಶರೀರ ಸ್ಪರ್ಶದಿಂದಾಗಿ ನನ್ನ ದೇಹದ ನರನಾಡಿಗಳು ಮಿಡಿಯ ತೊಡಗಿದ್ದವು. ನಾನು ಕೂಡ ಅತ್ಯಂತ ಆಪ್ಯಾಯಮಾನದಿಂದ ಅವಳನ್ನು ಆಲಂಗಿಸಿಕೊಂಡಿದ್ದೆ. ನಾವಿಬ್ಬರೂ ಹಾಸಿಗೆಯ ಕಡೆ ನಡೆದಿದ್ದೆವು. ಹೊರಗಡೆ ಮಳೆ ವಿಪರೀತವಾಗಿತ್ತು. ಮಿಂಚಿನ ಬೆಳಕು ಕಿಟಕಿ ಪರದೆಗಳ ಮೇಲೆ ಮೂಡಿ ಮರೆಯಾಗುತ್ತಿತ್ತು. ನಾವು ನಗ್ನರಾಗಿದ್ದೆವು. ಒಬ್ಬರ